ಕೇಂದ್ರ ಪುರಸ್ಕೃತ ಯೋಜನೆ / ಕೇಂದ್ರ ಯೋಜನೆ ಮೇಲಣ ಒಟ್ಟು ವೆಚ್ಚ ರೂ. 1245.53 ಕೋಟಿಗಳಾಗಿದ್ದು, ಇದು ಕೇಂದ್ರ ಸರ್ಕಾರದಿಂದ ಬಂದ ಸ್ವೀಕೃತಿಗಳಿಗಿಂತಲೂ ಹೆಚ್ಚಾಗಿದೆ. ಆದ್ದರಿಂದ ಕೇಂದ್ರ ಸರ್ಕಾರದಿಂದ ಬಂದ ಹಣ ವೆಚ್ಚವಾಗದೇ ಉಳಿದಿರುವುದಿಲ್ಲ. ಆದಾಗ್ಯೂ ಈ ಅಂಕಿ ಅಂಶಗಳು ತಾತ್ಕಾಲಿಕವಾಗಿದ್ದು ಮತ್ತು ಸ್ಪಷ್ಟ ಚಿತ್ರಣ ಮಹಾಲೇಖಪಾಲರು 2005–06ನೇ ಸಾಲಿನ ಲೆಕ್ಕಗಳನ್ನು ಅಂತಿಮಗೊಳಿಸಿದ ನಂತರವೇ ದೊರೆಯುತ್ತದೆ.

ಇ) ಉದ್ಭವಿಸುವುದಿಲ್ಲ.

1011 (1622) ಶ್ರೀ ಅಭಯಚಂದ್ರ ಕೆ. (ಮೂಡಬಿದ್ರೆ) : ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ದಕ್ಷಿಣ ಕನ್ನಡ ಜಿಲ್ಲೆಯ ಮುಲ್ಕಿ–ಮೂಡಬಿದರೆ ವಿಧಾನಸಭಾ ಕ್ಷೇತ್ರ ವ್ಯಾಪ್ತಿಯಲ್ಲಿ ನಿಯಮ 94–ಸಿ ಅಡಿಯಲ್ಲಿ ಭೂ ಮಂಜೂರಾತಿಗಾಗಿ ಕಂದಾಯ ಇಲಾಖೆಗೆ ಬಂದ ಒಟ್ಟು ಅರ್ಜಿಗಳ ಸಂಖ್ಯೆ ಎಷ್ಟು;

ಆ) ಈ ಪೈಕಿ ಮಂಜೂರಾದ ಮತ್ತು ತಿರಸ್ಕರಿಸಿದ ಹಾಗೂ ತನಿಖೆಗೆ ಬಾಕಿಯಿರುವ ಅರ್ಜಿಗಳೆಷ್ಟು;

ಇ) ತಿರಸ್ಕರಿಸಿದ ಅರ್ಜಿದಾರರಿಗೆ ಮರು ಪರಿಶೀಲನೆಗೆ ಮನವಿ ಸಲ್ಲಿಸಲು ಅವಕಾಶವಿದೆಯೇ;

ಈ) ಹಾಗಿದ್ದಲ್ಲಿ ಕಾರಣವೇನು;

ಉ) ಈ ಬಗ್ಗೆ ಸರ್ಕಾರ ತೆಗೆದುಕೊಂಡ ಕ್ರಮವೇನು?

ಶ್ರೀ ಜಗದೀಶ್ ಶೆಟ್ಟರ್ (ಕಂದಾಯ ಸಚಿವರು) :

ಅ)

| ಮೂಲ್ಕಿ ಹೋಬಳಿ | ಮೂಡಬಿದ್ರೆ ಹೋಬಳಿ | ಒಟ್ಟು |
|---|---|---|
| 965 | 1664 | 2629 |

ಆ)

| ಹೋಬಳಿ | ಮಂಜೂರು | ತಿರಸ್ಕೃತ | ತನಿಖೆಗೆ ಬಾಕಿ |
|---|---|---|---|
| ಮೂಲ್ಕಿ | 185 | 780 | ಇಲ್ಲ |
| ಮೂಡಬಿದ್ರೆ | 660 | 1004 | ಇಲ್ಲ |
| ಒಟ್ಟು | 845 | 1784 | ಇಲ್ಲ |

ಇ) ಅವಕಾಶವಿರುವುದಿಲ್ಲ.

ಈ) ಪ್ರಶ್ನೆ ಉದ್ಭವಿಸುವುದಿಲ್ಲ.

ಉ) ಕರ್ನಾಟಕ ಭೂ ಕಂದಾಯ ಕಾಯ್ದೆ 1964ರ 94ಸಿ ರಡಿ ಅರ್ಜಿ ಹಾಕಿಕೊಳ್ಳದೇ ಇರುವ ಜನರಿಗೆ ಈ ಅವಕಾಶವನ್ನು ನೀಡುವ ಬಗ್ಗೆ ಯಾವುದೇ ಪ್ರಸ್ತಾವನೆಗಳು ಸರ್ಕಾರದ ಪರಿಶೀಲನೆಯಲ್ಲಿ ಇರುವುದಿಲ್ಲ.